ತೇಜಶ್ರೀ

# ವರ್ತಮಾನಕ್ಕೆ ಅಗತ್ಯವಾದ ಸಂವಾದಗಳು

ಕೇಶವ ಮಳಗಿಯವರ ಪುಸ್ತಕ 'ಒಂದೇ ಗುರಿ, ಬೇರೆ ದಾರಿ'ಯು ನಮ್ಮ ಕಾಲದ ಸಾಂಸ್ಕೃತಿಕ ಸಮಸ್ಯೆಯನ್ನು ಬಿಡಿಸಲು ಅಗತ್ಯವಾದ ಮಾದರಿಗಳನ್ನು ಕಳೆದ ಕಾಲದಿಂದ ತೆಗೆದುಕೊಡುತ್ತದೆ. ವೈಚಾರಿಕ ಭಿನ್ನಮತಗಳನ್ನು ಬಿಡಿಸಿ ಕೊಳ್ಳಲು ಅಗತ್ಯವಾದ ವಿವೇಚನೆ, ವ್ಯವಧಾನವು ಸಾಧ್ಯವೇ ಇಲ್ಲದ ಸನ್ನಿವೇಶ ಇಂದಿನದ್ದು. ಭಾವಾವೇಶದಿಂದ ಮುಕ್ತವಾದ ಚರ್ಚೆಯು ಸಾಧ್ಯವಾಗದಿರಲು ನಮ್ಮ ಅನಿಸಿಕೆಗಳು ಬಹಳ ಆತುರದ, ಪ್ರದರ್ಶನ ಪ್ರಿಯವಾದ ಕ್ರಿಯೆಗಳಲ್ಲಿ ಮೈದಳೆಯುತ್ತಿರುವುದೂ ಕಾರಣ. ಆರೋಗ್ಯಕರ ವಾದ ಸಂವಾದಗಳು ಬೆಂಕಿಯ ಬದಲು ಬೆಳಕನ್ನು ಮೂಡಿಸ ಬಲ್ಲವು ಎಂಬ ನಂಬಿಕೆಯನ್ನು ಈ ಕೃತಿಯು ಯಮ–ನಚಿಕೇತ; ಮೈತ್ರೇಯಿ–ಯಾಜ್ಞವಲ್ಕ; ಅಜಾತಸತ್ತು–ಬುದ್ಧನ ನಡುವಿನ ಸಂವಾದದ ಸಂಕಥನಗಳಿಂದ ಆರಂಭಿಸಿ, ಭಾರತೀಯ ಚಿಂತನ ಪರಂಪರೆಯಲ್ಲಿ ಅಡಕವಾಗಿರುವ ಸಂವಾದದ ನೆಲೆಗಳನ್ನು ಗಾಂಧೀಜಿ–ರವೀಂದ್ರನಾಥ ಟ್ಯಾಗೋರ್, ಗಾಂಧೀಜಿ–ಸುಭಾಷ್ ಚಂದ್ರ ಬೋಸ್ ಮತ್ತು ಗಾಂಧೀಜಿ–ಅಂಬೇಡ್ಕರ್ ಅವರ ನಡುವಿನ 'ಮಾತುಕತೆ'ಗಳ ಮೂಲಕ ವಿಸ್ತರಿಸುತ್ತದೆ.

ನಿಜವಾದ ಸಂವಾದಗಳು ಕೇವಲ 'ಅಕಡೆಮಿಕ್' ಆದ ಮಾತುಕಥೆಯಲ್ಲ. ಅವು ಸಮುದಾಯದ ನಡುವಿನ ಬಾಳುವೆಯ ದಿಕ್ಕನ್ನು ಬದಲಿಸುವಂತಹವು; ಕ್ರಿಯೆಯಲ್ಲಿ ಮುಕ್ತಾಯವಾಗುತ್ತ ದೂರಗಾಮಿಯಾದ ಪರಿಣಾಮಗಳನ್ನು ಹೊಂದಿರುವಂತಹವು. ಸಂವಾದ ನಡೆಸುವವರು ತಮ್ಮಂತೆ ಚಿಂತಿಸುವ ವ್ಯಕ್ತಿ, ಸಮುದಾಯಗಳನ್ನು ಪ್ರತಿನಿಧಿಸುತ್ತಿರುತ್ತಾರೆ.



**ಒಂದೇ ಗುರಿ, ಬೇರೆ ದಾರಿ**
(ಭಾರತೀಯ ಸಂವಾದ ಪರಂಪರೆ)
ಲೇ: ಕೇಶವ ಮಳಗಿ
ಪು: 252 ಬೆ: ₹ 220
ಪ್ರ: ಪಲ್ಲವ ಪ್ರಕಾಶನ
ಚನ್ನಪಟ್ಟಣ –ಅಂಚೆ,
ವಯಾ ಎಮ್ಮಿಗನೂರು – 583 113

'ನನ್ನ ಓದು' ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಬೇರೆ ಬೇರೆ ಓದುಗರು ಹೊಸ ಕನ್ನಡ ಪುಸ್ತಕಗಳ ಬಗ್ಗೆ ಬರೆಯಲಿದ್ದಾರೆ.